# ಸಾಮಾಜಿಕ ಸನ್ನಿಯಾಗಬೇಕಿರುವ ಓದುವ ಹವ್ಯಾಸ

**ಪುಸ್ತಕಗಳು ಇಂದು ದೃಶ್ಯ ಮಾಧ್ಯಮದಿಂದ ತೀವ್ರ ಪೈಪೋಟಿಯನ್ನು ಎದುರಿಸುತ್ತಿವೆ. ಆದರೂ ಪುಸ್ತಕಗಳ ಓದಿನ ಮಹತ್ವ ಕಡಿಮೆಯಾಗಿಲ್ಲ. ಪುಸ್ತಕಗಳಿಂದ ಜ್ಞಾನಾರ್ಜನೆ ಆಗುತ್ತದೆ. ಮನುಷ್ಯನು ಸುಭದ್ರ ಜೀವನ ರೂಪಿಸಿಕೊಳ್ಳಲು ಓದು ನೆರವಾಗುತ್ತದೆ. ಓದುವ ಹವ್ಯಾಸ ಜೀವನೋತ್ಸಾಹ ಹೆಚ್ಚಿಸುತ್ತದೆ. ಏಪ್ರಿಲ್ 19 ವಿಶ್ವ ಪುಸ್ತಕ ದಿನ.**

ಡಾ. ಎಂ.ಎಸ್. ಶ್ರೀಧರ್

ಅನಕ್ಷರಸ್ಥರೆಲ್ಲ ಅಜ್ಞಾನಿಗಳಲ್ಲ, ಅಕ್ಷರಸ್ಥರೆಲ್ಲ ಜ್ಞಾನಿಗಳೂ ಅಲ್ಲ. ಅನಕ್ಷರಸ್ಥರಿಂದಲೇ ಮೂಡಿದ ಜಾನಪದ ಅಪರಿಮಿತವಾದದ್ದು. ಜ್ಞಾನಾರ್ಜನೆಗೆ ಪುಸ್ತಕ ಓದುವುದೇ ಅತ್ಯುನ್ನತ ಮಾರ್ಗವೆಂದು ಹೇಳುವುದು ಕಷ್ಟವಾದರೂ ಜ್ಞಾನಾರ್ಜನೆಯಲ್ಲಿ ಓದುವ ಹವ್ಯಾಸದ ಪಾತ್ರವನ್ನು ಅಲ್ಲಗಳೆಯುವಂತಿಲ್ಲ.

'ಓದು' ಅಥವಾ ವಾಚನ ಬರೀ ಮನರಂಜನೆ, ಸಂದೇಶ ಅಥವಾ ಮಾಹಿತಿಯನ್ನು ಪಡೆಯುವುದಕ್ಕೆ ಸೀಮಿತವಲ್ಲ. 'ಓದು' ಬೌದ್ಧಿಕ ಬೆಳವಣಿಗೆಗೆ ನೆರವಾಗುವಂತೆ ದೃಶ್ಯ ಸಂಕೇತಗಳನ್ನು ಭಾವನೆ ಮತ್ತು ಪರಿಕಲ್ಪನೆಗಳನ್ನಾಗಿ ಪರಿವರ್ತಿಸುವ ಬಹುಸ್ತರಗಳ ಸಂಕೀರ್ಣ ಕ್ರಿಯೆ. ಕ್ರಮಬದ್ಧ ಓದು ವಿಶಿಷ್ಟ ಅರಿವು ಮತ್ತು ಸಂವೇದನೆಗಳನ್ನು ಬೆಳೆಸಿಕೊಳ್ಳಲು ತರಬೇತಿ ನೀಡುತ್ತದೆ. ಇಂತಹ ತರಬೇತಿ ವ್ಯಕ್ತಿಯ ಹಿಂದಿನ ಅನುಭವದಿಂದ ಪಡೆದ ತಿಳಿವು ಮತ್ತು ಅಂತರ್ ದೃಷ್ಟಿಗಳನ್ನು ಪ್ರಜ್ಞೆಗೆ ತಂದು ವಸ್ತು-ವಿಷಯದ ನಿರೀಕ್ಷಿತ ಕಲ್ಪನೆಗಳನ್ನು ಕಟ್ಟಿಕೊಡುತ್ತದೆ. ಹೀಗೆ 'ಓದು' ಒಂದು ಅನುಕರಣೀಯ ಆದರ್ಶಪ್ರಾಯ ಕಲಿಕಾ ಮಾರ್ಗವೆನಿಸುತ್ತದೆ. ಓದುವ ಸಾಮರ್ಥ್ಯದ ವೃದ್ಧಿಯೊಂದಿಗೆ ಕಲಿಕೆಯ ಸಾಮರ್ಥ್ಯವೂ ಹೆಚ್ಚುತ್ತದೆ. ಒಳ್ಳೆಯ ಓದುಗ ಒಳ್ಳೆಯ ಕಲಿಕೆಯಲ್ಲಿ ತೊಡಗುತ್ತಾನಲ್ಲದೆ, ವಿದ್ಯಾಭ್ಯಾಸ ಮತ್ತು ಜೀವನಗಳೆರಡರಲ್ಲೂ ಯಶಸ್ಸು ಹೊಂದುವುದು ನಿಶ್ಚಯ ಎಂದು ಅಧ್ಯಯನಗಳು ಸಾಬೀತುಪಡಿಸಿವೆ. ಗಂಭೀರ ಓದಿನಿಂದ ಉನ್ನತ ಸ್ತರಗಳಲ್ಲಿ ವಿಷಯದ ಪರಿಕಲ್ಪನೆಗಳ ಸಂಬಂಧಗಳ ಗ್ರಹಿಕೆ, ರಚನೆ, ವ್ಯಾಖ್ಯಾನ ಮುಂತಾದ ಅಮೂಲ್ಯ ಉಪಯುಕ್ತ ಜ್ಞಾನದ ವಿವಿಧ ಮಗ್ಗುಲುಗಳ ಪರಿಚಯ ಸಾಧ್ಯ.

ಭಾಷೆಗೆ ಸಂಬಂಧಿಸಿದ ಎಲ್ಲ ಕೆಲಸ ಕಾರ್ಯಗಳೂ ಮನುಷ್ಯನಿಗೆ ಸಂಬಂಧಿಸಿದವುಗಳೇ ಆಗಿದ್ದು ಓದುವ ಹವ್ಯಾಸ ಭಾಷೆ ಮತ್ತು ವ್ಯಕ್ತಿಯ ಸ್ವವಸ್ಥಿತ ಬೆಳವಣಿಗೆಯ ದೃಷ್ಟಿಯಿಂದಲೂ ಅಪೇಕ್ಷಣೀಯ. ಇಂದಿನ ಮಾಹಿತಿ ಯುಗದಲ್ಲಿ ತಂತ್ರಜ್ಞಾನ ಪ್ರತಿಭೆಗೆ ಅಗ್ರಸ್ಥಾನ ದೊರಕಿಸಿಕೊಟ್ಟು ಭಾಷಾ ಪ್ರತಿಭೆಗೆ ಆದ್ಯತೆ ಕಡಿಮೆಯಾಗಿದೆ. ತಂತ್ರಜ್ಞಾನದಲ್ಲಿ ಎಷ್ಟೇ ಉನ್ನತಿ ಸಾಧಿಸಿದರೂ ಅದು ಭಾಷಾ ಜ್ಞಾನದ ಕೊರತೆಯನ್ನು ತುಂಬಲಾರದು. ತಂತ್ರಜ್ಞಾನದ ಸಾಧನೆಗಳು ನೇರವಾಗಿ ಸಹಬಾಳ್ವೆ ಮತ್ತು ಮಾನವೀಯತೆಗಳಿಗೆ ಒತ್ತಾಸೆಯಾಗುವಂತವುಗಳಲ್ಲ. ತಂತ್ರಜ್ಞಾನದ ಅತಿಯಾದ ಆಸಕ್ತಿ ಮತ್ತು ದೃಶ್ಯ-ಶ್ರವಣ/-ಇ ಮಾಧ್ಯಮಗಳು ಭಾಷಾ ಅನುಭವ ಕೋಶದ ಮೇಲೆ ದಮನಕಾರಿಯಾಗಿ ವ್ಯಕ್ತಿಯ ಕಲ್ಪನಾ ಶಕ್ತಿಯನ್ನು ಕುಂಠಿತಗೊಳಿಸುತ್ತವೆ. ಬೌದ್ಧಿಕ ಸಾಧನೆಗಳ ಪರಿಣಾಮಕಾರಿ ಸಂವಹನಕ್ಕೆ ಭಾಷೆ ಮತ್ತು ಪುಸ್ತಕಗಳು ಅನಿವಾರ್ಯ ಮತ್ತು ಸಮರ್ಪಕ; ತಂತ್ರಜ್ಞಾನವಲ್ಲ.

ಕೈಗಾರಿಕಾ ಯುಗದಲ್ಲಿ ಸುಮಾರು ನೂರು ವರ್ಷಗಳ ಹಿಂದೆ ಪ್ರತಿಶತ 80 ರಷ್ಟು ಜನ ಕೌಶಲ್ಯರಹಿತ ದೈಹಿಕ ಕೆಲಸ ನಿರ್ವಹಿಸುತ್ತಿದ್ದರೆ, ಇಂದು ಮಾಹಿತಿ ಯುಗದಲ್ಲಿ ಆ ಸಂಖ್ಯೆ ಗಣನೀಯವಾಗಿ ಇಳಿದು ಹೆಚ್ಚಿನವರು ಬೌದ್ಧಿಕ ಉದ್ಯೋಗಿಗಳು. ಶಾಲಾ ಕಾಲೇಜುಗಳಲ್ಲಿ ಕಲಿತದ್ದು ಬಹಳ ಬೇಗ ಹಳತಾಗುವುದರಿಂದ, ಬೌದ್ಧಿಕ ಉದ್ಯೋಗಸ್ಥರು ನಿರಂತರ ಓದಿನಿಂದ ಮಾತ್ರ ತಮ್ಮ ಜ್ಞಾನದ ಪ್ರಸ್ತುತತೆಯನ್ನು ಕಾಪಾಡಿಕೊಳ್ಳಬಲ್ಲರು. ವಿಜ್ಞಾನ ಮತ್ತು ತಂತ್ರಜ್ಞಾನಗಳ ಕ್ಷಿಪ್ರ ಮುನ್ನಡೆ ಮತ್ತು ಪರಿಷ್ಕರಣೆಗಳ ಅರಿವೂ ಅವಶ್ಯಕ. ಇಂದಿನ ಮಾಧ್ಯಮಗಳು ಆರಂಭಿಕ ಕುತೂಹಲ ಕೆರಳಿಸುವಲ್ಲಿ ಸಾಕಷ್ಟು ಯಶಸ್ವಿಯಾಗಿವೆ. ಆದರೆ ಅಂತಹ ಕುತೂಹಲ, ಆಸಕ್ತಿ ಮತ್ತು ಅವಶ್ಯಕತೆಗಳನ್ನು ಪೋಷಿಸಿ, ಬೆಳೆಸಿ, ದೀರ್ಘ ಮತ್ತು ಆಳವಾದ ಅಧ್ಯಯನಕ್ಕೆ ಕೊಂಡೊಯ್ಯಲು ಪುಸ್ತಕಗಳ ಮೊರೆ ಹೋಗಲೇಬೇಕು. ಈ ಕ್ರಿಯೆಗೆ ಪುಸ್ತಕಗಳು ವಿಷಯ ವೈವಿಧ್ಯತೆ ಮತ್ತು ವಿವಿಧ ಹಂತಗಳಲ್ಲಿ ಸಾಮಗ್ರಿ ದೊರಕಿಸಿ ವ್ಯಕ್ತಿಯ ಆಯ್ಕೆಗೆ ಪ್ರೋತ್ಸಾಹವಿತ್ತು, ಇಷ್ಟ ಬಂದದ್ದನ್ನು ಇಷ್ಟವಾದಲ್ಲಿ ತನ್ನ ಜ್ಞಾನತೃಷೆ ಮತ್ತು ಕೌಶಲ್ಯಗಳಿಗೆ ಅನುಗುಣವಾಗಿ ಓದುವ, ಮರುಓದುವ, ನಿಲ್ಲಿಸಿ ಚಿಂತಿಸುವ ಸ್ವಾತಂತ್ರ್ಯ ನೀಡುತ್ತವೆ. ಶತಮಾನಗಳ ಹಿಂದೆ ಕೆಲವೇ ಪ್ರತಿಷ್ಠಿತರಿಗೆ ಸೀಮಿತವಾಗಿದ್ದ 'ಓದು' ಈಗ ಪ್ರಜಾಪ್ರಭುತ್ವೀಕರಣಗೊಂಡು ಎಲ್ಲ ಅಕ್ಷರಸ್ಥರಿಗೂ ಲಭ್ಯವಾಗಿರುವುದೇ ಪುಸ್ತಕಗಳಿಂದ.

ಒಳ್ಳೆಯ ಓದುಗ ಓದುವುದನ್ನು ಒಂದು ವ್ಯಸನವೋ ಎನ್ನುವಷ್ಟು ಇಷ್ಟಪಡುತ್ತಾನೆ. ಚೆನ್ನಾಗಿ ಓದಲಾರದವರು, ವಿಶೇಷವಾಗಿ ಮಕ್ಕಳು, ಓದುವುದನ್ನೇ ದ್ವೇಷಿಸಲಾರಂಭಿಸುವುದು, ಓದು ಇಲ್ಲವಾದಾಗ ಬೇರೆ ಮನರಂಜನೆಯತ್ತ ಆಕರ್ಷಿಸಲ್ಪಟ್ಟು, ಬೌದ್ಧಿಕ ಸೋಮಾರಿತನಕ್ಕೆ ಶರಣಾಗುವುದು ಸರ್ವೇಸಾಮಾನ್ಯ ಎಂದೂ ಅಧ್ಯಯನಗಳಿಂದ ತಿಳಿದಿದೆ. ಇದಕ್ಕೆ ತದ್ವಿರುದ್ಧವಾಗಿ, ಓದುವ ಹವ್ಯಾಸವಿರುವವರು ಓದುವ ಕೌಶಲ್ಯತೆಗಳನ್ನು ಅರಿತಿದ್ದು, ಓದುವ ಮತ್ತು ಗ್ರಹಿಕೆಯ ವೇಗವನ್ನು ಸತತ ವೃದ್ಧಿಸಿಕೊಳ್ಳುತ್ತಿರುತ್ತಾರೆ. ಓದದವರು ಒಳ್ಳೆಯ ಪುಸ್ತಕಗಳ ಬಗ್ಗೆ ತಿಳಿಯಲಾರರು, ಅಂತಹ ಪುಸ್ತಕಗಳನ್ನು ಶೋಧಿಸಲಾರರು. ಅಲ್ಲದೆ ಅವರ ಓದುವ ಕೌಶಲ್ಯ ತುಂಬ ದುರ್ಬಲವಾಗಿರುತ್ತದೆ. ಮಕ್ಕಳಾಗಲಿ, ವಯಸ್ಕರಾಗಲಿ ಓದದಿರಲು ಮುಖ್ಯ ಕಾರಣ ಅವರಿಗೆ ಓದು ಕಷ್ಟ ಮತ್ತು ಸಕಾಲದಲ್ಲಿ ಸರಿಯಾದ ಪುಸ್ತಕವನ್ನು ಪಡೆಯಲಾರದವರಾಗಿರುತ್ತಾರೆ.

### ಮಕ್ಕಳಲ್ಲಿ ಓದುವ ಹವ್ಯಾಸ

ಯಾವುದೇ ಸಮಾಜದಲ್ಲಿ ಕ್ರಮಬದ್ಧ ಓದುಗರು ಕಡಿಮೆ ಅಥವಾ ಅಲ್ಪಸಂಖ್ಯಾತರು. ಓದುವ ಹವ್ಯಾಸವನ್ನು ಅಳೆಯುವ ಮಾನದಂಡಗಳ ನ್ಯೂನತೆಗಳಿಂದಾಗಿ ಕೆಲವೆಡೆ ಓದುಗರ ಸಂಖ್ಯೆ ಉತ್ಪ್ರೇಕ್ಷೆಗೊಂಡಿರಬಹುದು. ಬಹಳಷ್ಟು ದೇಶಗಳಲ್ಲಿ (ಎಲ್ಲ ಕಾಲದಲ್ಲೂ) ವಯಸ್ಕರ ಎರಡರಷ್ಟು ಸಂಖ್ಯೆಯ ಮಕ್ಕಳು ಓದಿನಲ್ಲಿ ತೊಡಗಿರುತ್ತಾರೆ. ಕುತೂಹಲದ ಸಂಗತಿ ಎಂದರೆ ಓದುಗರಲ್ಲೇ ಓದುವ ಉತ್ಸಾಹದಲ್ಲಿ ಸಾಕಷ್ಟು ವ್ಯತ್ಯಯಗಳಿರುತ್ತದೆ. ಉದಾಹರಣೆಗೆ ಮಕ್ಕಳಲ್ಲಿ 8 ರಿಂದ 13 ವಯೋಮಾನ ವಿರಾಮದ ಓದಿಗೆ ಪರ್ವಕಾಲ. ಈ ವಯಸ್ಸಿನಲ್ಲಿ ಮಕ್ಕಳು ಓದುವುದರಲ್ಲಿ ಮತ್ತು ಗ್ರಂಥಾಲಯಗಳಿಗೆ ಭೇಟಿ ನೀಡುವುದರಲ್ಲಿ ಅತೀವ ಆಸಕ್ತಿ ಹೊಂದಿರುತ್ತಾರೆ. ಇದೇ ವಯಸ್ಸಿನಲ್ಲಿ ಬೆಳೆಸಿಕೊಂಡ ಓದುವ ಹವ್ಯಾಸ ಜೀವನ ಪರ್ಯಂತ ಉಳಿಯಲು ಮತ್ತು ಬೆಳೆಯಲು ಸಾಧ್ಯ. ಆ ವೇಳೆಯಲ್ಲಿ ಅವರನ್ನು ಓದಿಗೆ ಹಚ್ಚದಿದ್ದರೆ, ನಂತರದ ದಿನಗಳಲ್ಲಿ ವಯಸ್ಸಾದಂತೆ ಆಸಕ್ತಿ ಕುಂದುತ್ತಾ ಹೋಗುತ್ತದೆ. ಈ ವಯಸ್ಸಿನಲ್ಲಿ ಮಕ್ಕಳು ಹಲವಾರು ಬೌದ್ಧಿಕ ಹಾಗೂ ಮಾನಸಿಕ ಬದಲಾವಣೆ ಮತ್ತು ಬೆಳವಣಿಗೆಗಳಿಗೆ ಒಳಪಡುವುದರಿಂದ ವೈವಿಧ್ಯಮಯವಾದ ಆಸಕ್ತಿ ಮತ್ತು ಅಭಿರುಚಿ ಮೊಳೆತಿರುತ್ತದೆ. ನಂತರದ ದಿನಗಳಲ್ಲಿ ಈ ಅಮೂಲ್ಯ ಕುತೂಹಲ ಕವಲೊಡೆದು ಪ್ರೀತಿ, ಸಾಹಸ, ಇತ್ಯಾದಿಗಳಲ್ಲಿ ಚದುರಿ ಹೋಗಿ, ಓದಿಗಾಗಿ ಹಂಬಲಿಸುತ್ತಿದ್ದ ಪ್ರೇರಣೆಗಳು ದುರ್ಬಲವಾಗತೊಡಗುತ್ತವೆ.

ಮೇಲಾಗಿ ಇದೇ ವಯಸ್ಸಿನಲ್ಲಿ ಶಾಲೆಯ ಪಾಠಪ್ರವಚನಗಳಿಗೂ ಓದಿಗೂ ನಿಕಟ ಸಂಬಂಧವನ್ನು ಗುರುತಿಸಬಹುದಾಗಿದೆ. ಅಂತೆಯೇ ಈ ವಯಸ್ಸಿನಲ್ಲಿ ಇನ್ನಿತರ ಶೈಕ್ಷಣಿಕ ಮತ್ತು ಮನರಂಜನಾ ಮಾಧ್ಯಮಗಳೂ ಓದಿಗೆ ಪೂರಕವಾಗಿ ರೂಪುಗೊಳ್ಳುತ್ತಿರುತ್ತವೆ. ಕಥೆ ಕಾದಂಬರಿಗಳನ್ನು ಹೊರತುಪಡಿಸಿದ (non-fiction) 'ಓದು' ಪಾಠಪ್ರವಚನಗಳಿಗೆ ಪೂರಕವಾಗಿ ವಿದ್ಯೆ, ಉದ್ಯೋಗ ಮತ್ತು ಜೀವನಕ್ಕೆ ಅತ್ಯಂತ ಉಪಯುಕ್ತ.

ಯುನೆಸ್ಕೋ ನಡೆಸಿದ ಮಕ್ಕಳ ಓದುವ ಹವ್ಯಾಸದ ಬಗೆಗಿನ ಅಂತರ್‌ರಾಷ್ಟ್ರೀಯ ಅಧ್ಯಯನವೊಂದರಲ್ಲಿ ಪುಸ್ತಕಗಳನ್ನು ಓದುವ ಮಕ್ಕಳ ಶೈಕ್ಷಣಿಕ ಪ್ರಗತಿ ಪ್ರತಿಶತ 30 ರಷ್ಟು ಅಧಿಕವಾದದ್ದನ್ನು ಮತ್ತು ಮಕ್ಕಳಲ್ಲಿ ಹೆಚ್ಚಿನ ಕುತೂಹಲ ಕೆರಳಿಸಿದ್ದನ್ನು ದೃಢೀಕರಿಸಿವೆ. ಇಂತಹ ಜ್ಞಾನಾರ್ಜನೆ ಜೀವನ ಮತ್ತು ಸಮಾಜಕ್ಕೆ ಒಂದು ಸುಭದ್ರ ಅಡಿಪಾಯ. ಓದುವ ಹವ್ಯಾಸವನ್ನು ದೀರ್ಘ ಮತ್ತು ಅಚಲ ಪ್ರೇರಣೆಗಳ ತಳಹದಿಯ ಮೇಲೆ ಬೆಳೆಸಬೇಕೆ ಹೊರತು ತಾತ್ಕಾಲಿಕ ಆಕರ್ಷಣೆಗಳಿಂದಲ್ಲ ಎನ್ನುವುದೂ ಮುಖ್ಯ. ಓದುಗರನ್ನು ಸೃಷ್ಟಿಸುವುದು ಮತ್ತು ಓದುವ ಹವ್ಯಾಸವನ್ನು ಬೆಳೆಸುವುದು ಹೇಗೆ ಎಂಬುದಕ್ಕೆ ಉತ್ತರ ಮೇಲೆ ತಿಳಿಸಿದ 8-13 ವಯೋಮಾನದ ಮಕ್ಕಳ ವರ್ತನೆಯಲ್ಲಿದೆ ಎನ್ನಬಹುದು. ಶಾಲಾ ದಿನಗಳ ಓದುವ ಹವ್ಯಾಸ ಉಪಾಧ್ಯಾಯರೊಟ್ಟಿಗಿನ ಸೌಹಾರ್ದಯುತ ಸಂಬಂಧವನ್ನು ಸೃಷ್ಟಿಸುತ್ತದೆ. ಅನೇಕ ವೇಳೆ ಉಪಾಧ್ಯಾಯರೇ ಉತ್ಸಾಹಿ ಓದುಗರಾಗಿ ವಿದ್ಯಾರ್ಥಿಗಳಿಗೆ (role model) ಗಳಾಗಿಬಿಡುತ್ತಾರೆ. ಅಂತಹ ಉಪಾಧ್ಯಾಯರುಗಳು ತರಗತಿಗಳಲ್ಲಿ ಹೇಳುವ, ಬಳಸುವ ಮತ್ತು ತೋರಿಸುವ ಪುಸ್ತಕಗಳಲ್ಲಿ ವಿದ್ಯಾರ್ಥಿಗಳಿಗೆ ಅತೀವ ಆಸಕ್ತಿಯಿರುತ್ತದೆ. ಹೀಗೆ ಪುಸ್ತಕಗಳನ್ನು ವಿದ್ಯಾರ್ಥಿಗಳಿಗೆ ಪರಿಚಯ ಮಾಡಿಸಿ ಮಕ್ಕಳಲ್ಲಿ ನಿರಂತರ ಓದುವ ಹವ್ಯಾಸಕ್ಕೆ ಬುನಾದಿ ಹಾಕುವ ಉಪಾಧ್ಯಾಯರುಗಳ ಕಾಣಿಕೆ ಅತ್ಯಮೂಲ್ಯ. ಇದರೊಂದಿಗೆ ಪೋಷಕರ ಒತ್ತಾಸೆ, ಓದುಗ ಸ್ನೇಹಿ ಗ್ರಂಥಪಾಲಕರು, ಸಾರ್ವಜನಿಕ ಮತ್ತು ಶಾಲಾ ಗ್ರಂಥಾಲಯಗಳು, ಅಡಚಣೆಗಳನ್ನು ನಿವಾರಿಸಿ ಓದುವ ಹವ್ಯಾಸವನ್ನು ಬೆಳೆಸಿ ಒಂದು ಸಾಮಾಜಿಕ ಸನ್ನಿಯಾಗಿಸಬೇಕಿದೆ. ■

## ಲೇಕಖರ ವಿವರ



ಡಾ. ಎಂ ಎಸ್ ಶ್ರೀಧರ್‌ರವರು ಗಣಿತ ಹಾಗೂ ಬಿಸಿನೆಸ್ ಮ್ಯಾನೇಜ್‌ಮೆಂಟ್ ಎರಡೂ ವಿಷಯಗಳಲ್ಲಿ ಸ್ನಾತಕೋತ್ತರ ಪದವೀಧರರಾಗಿದ್ದು, ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನದಲ್ಲಿ ಡಾಕ್ಟರೇಟ್ ಪಡೆದಿದ್ದಾರೆ. ಅವರು ಕಳೆದ ೩೫ ವರ್ಷಗಳಿಂದ ಗ್ರಂಥಾಲಯ ಕ್ಷೇತ್ರದಲ್ಲಿದ್ದು, 1978 ರಿಂದ ಇಸ್ರೋ ಉಪಗ್ರಹ ಕೇಂದ್ರದ ಗ್ರಂಥಾಲಯ ಮತ್ತು ಪ್ರಲೇಖನ ವಿಭಾಗದ ಮುಖ್ಯಸ್ಥರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಇದಕ್ಕೂ ಮುನ್ನ ಎನ್ ಎ ಎಲ್, ಐ ಐ ಎಂ (ಬೆಂಗಳೂರು) ಹಾಗೂ ಮೈಸೂರು ವಿಶ್ವ ವಿದ್ಯಾಲಯಗಳ ಗ್ರಂಥಾಲಯಗಳಲ್ಲಿ ಕಾರ್ಯ ನಿರ್ವಹಿಸಿದ ಅನುಭವವಿದೆ.

ಡಾ. ಶ್ರೀಧರ್‌ರವರು ನಾಲ್ಕು ಪುಸ್ತಕಗಳು ಹಾಗೂ ೭೪ ಸಂಶೋಧನಾ ಪ್ರಬಂಧಗಳನ್ನು ಪ್ರಕಟಿಸಿದ್ದಾರೆ, ಹಾಗೂ ವಿವಿಧ ಪುಸ್ತಕಗಳಿಗಾಗಿ ೫ ಪಠ್ಯಗಳನ್ನೂ ಬರೆದಿದ್ದಾರೆ. ಮುಕ್ತ ವಿಶ್ವವಿದ್ಯಾನಿಲಯದ ಗ್ರಂಥಾಲಯ ವಿಜ್ಞಾನ ಪದವಿ ಹಾಗೂ ಸ್ನಾತಕೋತ್ತರ ವಿದ್ಯಾರ್ಥಿಗಳಿಗಾಗಿ ಪಠ್ಯ ಸಾಮಾಗ್ರಿಯನ್ನು ರಚಿಸಿದ್ದು, ಇದಲ್ಲದೆ ಸುಮಾರು ೨೨ ಲೇಖನಗಳನ್ನು ವಿವಿಧ ಸಮ್ಮೇಳನಗಳಲ್ಲಿ ಮಂಡಿಸಿದ್ದಾರೆ.

**E-mail:** sridharmirle@yahoo.com, mirlesridhar@gmail.com, sridhar@isac.gov.in **;**
**Phone:** 91-80-25084451; **Fax:** 91-80-25084475.